ಶ್ರೀ ಎಸ್. ಆರ್. ಕಂಠಿ.—ಒಪ್ಪುತ್ತಾರೆಂದು ಕನ್‌ಕರೆನ್ಸ್ ಕೊಡುವುದಕ್ಕಾಗುವುದಿಲ್ಲ. ಇದನ್ನು ಕೊಡಲು ಕೇಂದ್ರ ಸರಕಾರದವರೂ ಒಪ್ಪುತ್ತಾರೆಯೇ ಅದನ್ನು ನೋಡಿ ಸರಕಾರ ಯೋಚನೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಸರಕಾರ ಒಪ್ಪಿರುವಂತೆ ಹೆಚ್ಚು ಸಂಬಳಗಳನ್ನು ಕೊಡುವುದನ್ನು ಯಾವಾಗ ಜಾರಿಗೆ ತರಲು ಸಾಧ್ಯ ?

Sri S. R. KANTHI.—Sir, I will give the entire list. In August 1964 the Government of Mysore agreed to implement the scales of pay. They have already implemented in one or two cases where there was no difficulty and the Government of India have agreed. We have sent a list now. There are two questions; one is, qualifications prescribed are post-graduate qualifications; but here we have employed persons who are not post-graduates. So, that question is also sent to Government of India to agree to our scheme; the second is weitage. Government of India has been approached to agree to the proposal to give weightage.

Projects Works in Gowribidanur Taluk.

*Q.—100. Sri R. N. LAKSHMIPATHI (Gowribidanur).—

Will the Government be pleased to state:—

(*a*) the number of projects works in Gowribidanur Taluk that are stopped by the Public Works Department due to non-co-operation of the contractors;

(*b*) what are those projects;

(*c*) what is the money spent on each of the project so far;

(*d*) since what date the projects are stopped;

(*e*) the action taken by them against such contractors ?

A.—Sri ALUR HANUMANTHAPPA (Deputy Minister for Minor Irrigation).—

(*a*) 20 works.

(*b*), (*c*), (*d*) and (*e*) *Vide* Statement appended.

STATEMENT

Sl. No.	Name of work	Up-to-date outlay.	Date from which the work stopped.	Remarks
1	2	3	4	5
1	Increasing the capacity of Venkatapura Iyyammanakere...	33,648	12/63	Many notices issued to the contractor to resume the work immediately. Action is being taken to finalise the works as per agreement enforcing penal clauses.
2	Increasing the capacity of Idagur Nallurkunte ...	24,852	10/63	Do
3	Restoration of Sadarlahalli Eachalakunte ...	20,246	3/63	Do
4	Restoration of Chikkamalligere tank ...	20,144	8/63	Do
5	Restoration of Venkatapura Uppakunte ...	5,991	7/62	Do
6	Restoration of Kadabur tank ...	1,419	8/63	Do
7	Matyavalahalli Obaladevarakunte ...	12,052	2/63	Do
8	Restoration of Jodinaganahalli tank ...	9,343	3/63	Do
9	Restoration of Mallasandra Mullakunte ...	2,596	3/ 0	Do
10	Restoration of Dronakunte tank ...	6,752	12/63	Do
11	Restoration of Rayarekalahalli tank ...	4,514	3/61	Do
12	Constructing a pick-up near Honnappanahalli ...	...	...	Do

1	2	3	4	5
13	Constructing a pick-up near Bommasettihalli across... Neralahalli.	11,779	2/64	Many notices issued to the contractor to resume the work immediately. Action is being taken to finalise the works as per agreement enforcing penal clauses.
14	Constructing an ane across W.W. halla of Thippaganahalli tank.	27,522	10/63	Do
15	Constructing a pick-up across Channammanahalli near Cholasettihalli.	3,044	10/64	Do
16	Improving a feeder Channel—Restoring the same of Gulakunte Tank.	36,748	3/62	Do
17	Do Balaganahalli.	6,949	3/63	Do
18	Do Chigatagere.	7,149	3/63	Do
19	Do Idagur.	5,944	3/64	Do
20	Do pick-up near Alipur.	2,909	2/64	Do

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನಮ್ಮ ತಾಲ್ಲೂಕಿನಲ್ಲಿ ಸುಮಾರು 20 ಕೆಲಸಗಳು ಎಂತಿವೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇದಕ್ಕೆ ಕಾರಣ ಇಲ್ಲಿನ ಕಂಟ್ರಾಕ್ಟರುಗಳಿಗೆ ಕೆಲಸ ಮಾಡಲು ಭಯವೇ ಇಲ್ಲ ಮತ್ತು ಅಧಿಕಾರಿಗಳು ಇದರ ಬಗ್ಗೆ ಗಮನ ಕೊಡುತ್ತಿಲ್ಲ, ಇದರ ಬಗ್ಗೆ ಸರಕಾರ ಯಾವ ಕ್ರಮ ತೆಗೆದುಕೊಂಡಿದೆ ?

† ಶ್ರೀ ಆಲೂರು ಹನುಮಂತಪ್ಪ.—ಈ ಕೆಲಸಗಳಲ್ಲಿ ಬಹು ಭಾಗ ಮುಗಿದಿರುತ್ತದೆ. ಇಲ್ಲಿರುವ 20 ಕೆಲಸಗಳಲ್ಲಿ ಯಾವುದು ಬಹು ಮುಖ್ಯ ಎನ್ನುವುದನ್ನು ಚೀಫ್ ಇಂಜನೀಯರ್‌ರವರು ನೋಡಿ ಮಾಡಬೇಕೆಂದು ಅವರಿಗೆ ಸೂಚನೆಗಳನ್ನು ಕಳುಹಿಸಲಾಗಿದೆ. ಅವರೇ ಇದನ್ನು ಮಾಡುತ್ತಾರೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕೆಲಸಗಳನ್ನು ಇಲ್ಲ ಮುಗಿಸುವುದಿಲ್ಲ. ಇಲ್ಲ ಮಾಡಿರುವ ಕೆಲಸಗಳನ್ನು ಅರ್ಧದಲ್ಲೇ ನಿಲ್ಲಿಸಿದ್ದಾರೆ. ಇಂತಹ ಕೆಲಸಗಳನ್ನು ಮಾಡದೆ ಇರುವ ಕಂಟ್ರಾಕ್ಟರುಗಳನ್ನು ಬ್ಲ್ಯಾಕ್ ಲಿಸ್ಟ್‌ನಲ್ಲಿಟ್ಟಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಇದರಲ್ಲಿ ರೆಸ್ಟೊರೇಷನ್ನು ಕೆಲಸಗಳೇ ಹೆಚ್ಚು. ಎಲ್ಲೋ ಒಂದೆರಡು ಕೆಲಸಗಳು ಬಂಡಿಂಗ್ ಕೆಲಸಗಳು ಇತ್ಯಾದಿ ಇವೆ. ಇದರಲ್ಲಿ ಎಸ್ಟಿಮೇಟು ಮಾಡಿದ್ದು 48 ಸಾವಿರ ರೂಪಾಯಿಗಳಲ್ಲಿ ಈಗಾಗಲೇ ಸುಮಾರು 33 ಸಾವಿರದಷ್ಟು ಖರ್ಚಾಗಿದೆ. ಇನ್ನುಳಿದ ಕೆಲಸಗಳನ್ನೂ ಆದಷ್ಟು ಬೇಗ ಮಾಡುತ್ತಾರೆ.

ಶ್ರೀ ಜಿ. ರಾಮೇಗೌಡ.—ಅನೇಕ ಕಡೆಗಳಲ್ಲಿ ನೋಟೀಸುಗಳನ್ನು ಕೊಟ್ಟಿದೆ ಎಂದು ಹೇಳಿದ್ದೀರಿ. ಎಂದರೆ ಇವರು ಅಗ್ರಿಮೆಂಟಿಗೆ ವಿರೋಧವಾಗಿ ಕೆಲಸ ಮಾಡಿದರು ಎಂದೇ ಹೇಗೆ ?

ಶ್ರೀ ಆಲೂರು ಹನುಮಂತಪ್ಪ.—ಯಾರು ಡಿಫಾಲ್ಟರುಗಳಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ಕಡೆಗಳಲ್ಲಿ ಅಗ್ರಿಮೆಂಟು ಪ್ರಕಾರ ಕೆಲಸ ಮಾಡದೇ ಇದ್ದರೆ ಕೆಲವು ವೇಳೆ ಪೀನಲ್ಟಿಸು ಮಾಡಲಾಗುತ್ತದೆ. ಇದರಮೇಲೆ ಸರಿಯಾಗಿ ಕೆಲಸ ಮಾಡದೇ ಇದ್ದರೆ ಸರಕಾರಕ್ಕೆ ಫೈನು ಹಾಕುವ ಅಧಿಕಾರವೂ ಕೂಡ ಇದೆ. ಮತ್ತು ಅವರ ಅರ್ನೆಸ್ಟು ಮನಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೆಲಸಗಳನ್ನು ತೆಗೆದುಕೊಂಡಿರುವ ಕಂಟ್ರಾಕ್ಟರುಗಳು ಮೊದಲು ತೆಗೆದುಕೊಂಡ ಕೆಲಸಗಳನ್ನು ಮಾಡದೇ ಇದ್ದರೂ ಅವರಿಗೆ ಹೊಸ ಕೆಲಸಗಳನ್ನು ಕೊಟ್ಟು ಮಾಡಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ.

ಶ್ರೀ ಆಲೂರು ಹನುಮಂತಪ್ಪ.—ಕಂಟ್ರಾಕ್ಟರು ಒಂದೇ ಕೆಲಸವನ್ನು ಮಾಡಿ ಕುಳಿತುಕೊಳ್ಳುವುದಿಲ್ಲ. ಅವರುಗಳು ಹತ್ತಾರು ಕೆಲಸಗಳನ್ನು ತೆಗೆದುಕೊಂಡು ಮಾಡುತ್ತಿರುತ್ತಾರೆ. ಯಾವುದಾದರೂ ಕೆಲಸದಲ್ಲಿ ಅಗ್ರಿಮೆಂಟಿಗೆ ವಿರೋಧವಾಗಿ ನಡೆದುಕೊಂಡರೆ ಆಗ ಅವರ ಕಂಟ್ರಾಕ್ಟನ್ನು ಟರ್ಮಿನೇಟು ಮಾಡುತ್ತಾರೆ ಮತ್ತು ಅವರು ಇಟ್ಟಿರುವ ಸೆಕ್ಯೂರಿಟಿ ಡಿಪಾಸಿಟ್ಟು ಹಾಗೂ ಅರ್ನೆಸ್ಟು ಮನಿಯನ್ನೂ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಅಲ್ಲದೆ ಡಿಫಾಲ್ಟರುಗಳಾದರೆ ಅಂತಹ ಕಂಟ್ರಾಕ್ಟರನ್ನು ಬ್ಲಾಕ್ ಲಿಸ್ಟಿನಲ್ಲೂ ಇಡುತ್ತಾರೆ. ಕೆಲವು ವೇಳೆ ಫೈನ್ ಹಾಕುವ ಅಧಿಕಾರ ಕೂಡ ಸರಕಾರಕ್ಕಿದೆ.

ಶ್ರೀ ಆರ್. ಎನ್. ಲಕ್ಷಿಪತಿ.—ಕಂಟ್ರಾಕ್ಟರುಗಳನ್ನು ಬ್ಲ್ಯಾಕ್ ಲಿಸ್ಟಿನಲ್ಲಿಡುತ್ತೇವೆಂದು ಮಾನ್ಯ ಉಪಮಂತ್ರಿಗಳು ಇಲ್ಲ ಹೇಳಿದರು. ಉತ್ತರದಲ್ಲಿ ಹೇಳಿರುವ ತಖ್ತೆಯಲ್ಲಿರುವ ವೆಂಕಟಾಪುರ ಅಯ್ಯಮ್ಮನಕೆರೆ ಎನ್ನುವುದನ್ನು ಉದಾಹರಣೆಯಾಗಿ ಇಲ್ಲಿ ಹೇಳುತ್ತೇನೆ. ಇದರಲ್ಲಿ ಅಚ್ಚುಕಟ್ಟು ಸುಮಾರು 6,000 ಎಕರೆಗಳಷ್ಟು ಇದೆ. ಇದರಲ್ಲಿ 33 ಸಾವಿರಗಳಷ್ಟು ಖರ್ಚು ಮಾಡಲಾಗಿದೆ ಎಂದರೂ ಇನ್ನೂ ಕೆಲಸಗಳು ಪೂರ್ತಿಯಾಗಿಲ್ಲ. ಇಲ್ಲಿರುವ ಕಂಟ್ರಾಕ್ಟರುಗಳು ಬಂದು ಇಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕರೆದರೂ ಅವರುಗಳು ಇಲ್ಲಿ ಕೆಲಸ ಮಾಡಲು ಬರುತ್ತಿಲ್ಲ. ಹೀಗಾದರೆ ಅಂತಹ ಕಂಟ್ರಾಕ್ಟರುಗಳ ಮೇಲೆ ಸರಕಾರ ತಕ್ಕ ಕ್ರಮ ಏಕೆ ಕೈಗೊಳ್ಳಬಾರದು ?

ಶ್ರೀ ಆಲೂರು ಹನುಮಂತಪ್ಪ.—ಸರಿಯಾಗಿ ಕೆಲಸ ಮಾಡದೇ ಇರುವ ಕಂಟ್ರಾಕ್ಟರುಗಳ ಮೇಲೆ ತಕ್ಕ ಕ್ರಮವನ್ನು ಅಲ್ಲಿನ ಅಧಿಕಾರಿಗಳೇ ತೆಗೆದುಕೊಳ್ಳುತ್ತಾರೆ. ಇನ್ನೂ ಸ್ವಲ್ಪ ಮುಂದೆ ಹೋಗಿ ಹೇಳಬೇಕಾದರೆ, ಕೆಲವು ಕಡೆಗಳಲ್ಲಿ ಅಕ್ಸಿಪಿಷನ್ನುಗಳ ತೊಂದರೆ ಬರುತ್ತೆ. ಇಲ್ಲಿ ತುಂಬಾ ರೆಸ್ಟೊರೇಷನ್ನು ಕೆಲಸಗಳೇ ಹೆಚ್ಚಾಗಿವೆ. ಇವನ್ನು ಅಲ್ಲಿನ ಅಧಿಕಾರಿಗಳೇ ಪರೀಕ್ಷೆ ಮಾಡಿ ಯಾವುದು ಮುಖ್ಯವೋ ಅದನ್ನು ನೋಡಿ ಕಂಟ್ರಾಕ್ಟರುಗಳ ಮೂಲಕ ಅಧಿಕಾರಿಗಳು ಮಾಡಲು ತಕ್ಕ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು.—ಶ್ರೀ ಸುಬ್ಬಯ್ಯನಾಯಕರು ಶ್ರೀ ಡಿ. ಪರಮೇಶ್ವರಪ್ಪನವರ 148ನೆಯ ಪ್ರಶ್ನೆಯನ್ನು ಹಾಕಬಹುದು.